ಆಕ್ಷೇಪಣೆ. ಸೊಪ್ಪು ಹಾಕಿರಲಿಲ್ಲ ಶುಭದಾ. 'ನನ್ನ ವಿಷಯಕ್ಕೆ ಬರ್ಬೇಡ ನೀನು' ಕಡ್ಡಿ ಮುರಿದಂತೆ ಹೇಳಿ ಅಮ್ಮನ ಬಾಯಿ ಮುಚ್ಚಿಸಿದವಳನ್ನು ಒಂದು ಸಲ್ಲಾಪದ ಗಳಿಗೆಯಲ್ಲಿ ಬಾಯ್ಬಿಡಿಸಿದ್ದಳು ಕಾವೇರಿ,

"ಒಂದು ಮಾತು ಕೇಳ್ತೀನಿ, ಸತ್ಯ ಹೇಳ್ತೀಯಾ?"

"ಕೇಳು ಅದಕ್ಯಾಕೆ ಹಿಂದೆಮುಂದೆ ನೋಡ್ತಿದ್ದಿ?"

"ಸತ್ಯಕ್ಕಾರೂ ನಿಂಗೆ ಕಂಪ್ಯೂಟರ್ರೋ, ಅದೆಂತದೋ ಕಲೀಬೇಕು ಅಂತ ಆಸೆ ಉಂಟಾ ಅಥವಾ ಊರಿಗೆ ಹೋದ್ರೆ ನಂಗೆ ಕಷ್ಟ ಆಗುತ್ತೆ ಅಂತ ಆಟ ಕಟ್ತಿದೀಯಾ?"

"ಎರಡೂ..."

"ಹುಚ್ಚುಹುಡುಗಿ" ಕಾವೇರಿಯ ಕಣ್ಣುಗಳು ಒದ್ದೆಯಾಗಿ ಅವಳು ಆರ್ದ್ರ ನೋಟದಿಂದ ಸೊಸೆಯನ್ನು ದಿಟ್ಟಿಸಿದ್ದಳು. ಇದೇ ಸುಸಮಯವೆಂದು ಹುಡುಗಿಗೆ ಅನಿಸಿತೇನೋ. ಯಾವತ್ತೂ ಇಲ್ಲದೆ ಅವತ್ತು ತನ್ನ ಅತ್ತೆಯ ಗತಜೀವನ ಕೆದಕುವ ಉತ್ಕಟೇಚ್ಛೆಯಿಂದ ಕೇಳಿದ್ದಳು ಶುಭದಾ,

"ಈಗ ನಾನೊಂದು ಮಾತು ಕೇಳ್ತೀನಿ, ಸತ್ಯ ಹೇಳ್ತೀಯಾ ಅತ್ತೆ?"

"ಕೇಳೇ..."

"ಹಿಂಗೆ ಯಾರದ್ದೋ ಕಾಲಬುಡದಲ್ಲಿ ಬಂದು ಸೇರ್ಕೊಳ್ಳೋ ಅವಸ್ಥೆ ನೀನೇ ಕೈಯಾರೆ ತಂದ್ಕಂಡಿದ್ದು ಅಂತ ಹೇಳ್ತಿರ್ತಾಳಲ್ಲ ಅಮ್ಮ..."

ಕಾವೇರಿಯ ಮುಖ ಕಪ್ಪಿಟ್ಟಿತ್ತು. ಈ ಹುಡುಗಿಯ ಎದುರು ಉಪ್ಪು, ಖಾರ ಸೇರಿಸಿ ಏನೆಲ್ಲಾ ಕಿವಿಗೆ ವರೆದಿದ್ದಾಳೋ ಇವಳಮ್ಮ? ತನ್ನ ಕಂಡರೆ ಅಸಹ್ಯ ಅನ್ನಿಸಿರಬಹುದಾ ಹುಡುಗಿಗೆ? ಬರೀ ಚೆಲ್ಲುಚೆಲ್ಲು ಎಂದು? ಪೂರ್ವಾಪರ ವಿವೇಚನೆಯಿಲ್ಲದ ಪೆದ್ದು ಎಂದು?

"ಇನ್ನೂ ಏನೇನು ಹೇಳಿದಾಳೆ ನಿನ್ನಮ್ಮ?" ಕಟುವಾಗಿ ಕೇಳಿದ್ದಳು ಕಾವೇರಿ.

"ನೋಡಿದ್ಯಾ, ನೋಡಿದ್ಯಾ, ನಿಂಗೆ ಸಿಟ್ಟು ಬರ್ತಿದೆ..."

"ನಮ್ಮ ಮಾತಿಗೆ ಬೆಲೆ ಕೊಡೋರಿದಾರೆ, ಕೇಳೋರಿದಾರೆ ಅಂದ್ರೆ ಸಿಟ್ಟು. ಯಾರಿಲ್ಲ ಅಂದ್ಮೇಲೆ ಸಿಟ್ಟೂ ಇಲ್ಲ, ಸೆಡವೂ ಇಲ್ಲ."

"ನಾನಿಲ್ವನೇ ಅತ್ತೆ? ನಿನ್ನ ಮಾತು ಕೇಳಲ್ಲನೇ?"

"ಏನೋಪ್ಪ..."

"ನೋಡು, ನೋಡು, ನಿಂಗೆ ನಿಜವಾಗ್ಲೂ ನನ್ಮೇಲೆ ಸಿಟ್ಟು ಬಂದಿದೆ..."

ಹಕ್ಕಳೆಗಟ್ಟಿದ ಹಳೆಯ ಗಾಯವನ್ನು ಕೆದಕಿದಂತಾಗಿ ಅಳು ಬಂದಿತ್ತು ಕಾವೇರಿಗೆ. ಅವಳದೇ ಸೆರಗಿನಿಂದ ಅವಳ ಕಣ್ಣೊರೆಸಿ ಸೋದರಸೊಸೆ ಲಲ್ಲೆಗರೆದಿದ್ದಳು,

"ತಪ್ಪಾಯ್ತು ಮಾರಾಯ್ತೀ, ಇನ್ಮೇಲೆ ಯಾವತ್ತೂ ಹಳೇಕತೇನ ಕೇಳಲ್ಲ ನಾನು..."

"ಹಂಗಲ್ಲ ಕಣೇ. ಯಾಕೋ ಹೊಟ್ಟೇಲಿ ಸಂಕಟ ಆಯ್ತು. ಬುದ್ಧಿ ಬೆಳೀದಿರೋ ಒಂದು ಕಾಲದಲ್ಲಿ ಮಾಡಿದ ತಪ್ಪು ಇಡೀ ಜೀವನಾನೇ ನುಂಗಿ ಹಾಕ್ತಲ್ಲ ಅಂತ ನೆನೆಸ್ಕೊಂಡ್ರೆ ಆಶ್ಚರ್ಯಾನೂ ಆಗುತ್ತೆ, ದುಃಖಾನೂ ಬರುತ್ತೆ..."

"....."

"ಅದನ್ನ ಪೂರಾ ತಪ್ಪು ಅಂತ್ಲೂ ಒಪ್ಪಲ್ಲ ನಾನು. ಹಿಂಗಾಗುತ್ತೇಂತ ನಂಗೇನು ಕನಸು ಬಿದ್ದಿತ್ತಾ? ವಿಧಿ ಅನ್ನು ಬೇಕಾದ್ರೆ..."

ಕಾವೇರಿ ಹೇಳಬಹುದಾದಷ್ಟನ್ನು ಸೊಸೆಯ ಎದುರು ಹೇಳಿಕೊಂಡಿದ್ದಳು. ಬಾಯಿ